# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **872** |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16.12.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮಂಡ್ಯ ಜಿಲ್ಲೆ ಒಳಗೊಂಡಂತೆ ರಾಜ್ಯಾದ್ಯಂತ ಭತ್ತ, ರಾಗಿ, ಸೇರಿದಂತೆ ವಿವಿಧ ಧಾನ್ಯಗಳನ್ನು ಖರೀದಿಸಲು ಎಷ್ಟು; ಧಾನ್ಯ ಖರೀದಿ ಕೇಂದ್ರಗಳನ್ನು ಆರಂಭಿಸಲು ಸರ್ಕಾರ ಸಿದ್ಧತೆ ಮಾಡಿಕೊಂಡಿದೆ ಅಥವಾ ಈಗಾಗಲೇ ಖರೀದಿ ಕೇಂದ್ರಗಳನ್ನು ಆರಂಭಿಸಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು)</td><td>

2024-25ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದ ರೈತರಿಂದ ಭತ್ತ, ರಾಗಿ ಹಾಗೂ ಬಿಳಿಜೋಳ ಖರೀದಿಸಲು ಈಗಾಗಲೇ ಆದೇಶ ಹೊರಡಿಸಲಾಗಿದ್ದು, ರೈತರ ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಪ್ರಾರಂಭಿಸಲಾಗಿರುವ ಭತ್ತ, ರಾಗಿ ಮತ್ತು ಬಿಳಿಜೋಳದ ಒಟ್ಟು ಖರೀದಿ ಕೇಂದ್ರಗಳ ವಿವರ ಕೆಳಗಿನಂತಿವೆ.

<table>
<tr><th>ಆಹಾರಧಾನ್ಯ</th><th>ಜಿಲ್ಲೆಗಳ ಸಂಖ್ಯೆ</th><th>ಖರೀದಿ ಕೇಂದ್ರಗಳ ಸಂಖ್ಯೆ</th></tr>
<tr><td>ಭತ್ತ</td><td>21</td><td>136</td></tr>
<tr><td>ರಾಗಿ</td><td>18</td><td>137</td></tr>
<tr><td>ಜೋಳ</td><td>13</td><td>93</td></tr>
</table>

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ- 1, 2 ಮತ್ತು 3 ರಲ್ಲಿ ಒದಗಿಸಲಾಗಿದೆ.

</td></tr>
<tr><td>ಆ</td><td>ಧಾನ್ಯ ಖರೀದಿ ಕೇಂದ್ರಗಳಲ್ಲಿ ಖರೀದಿಸುವ ಭತ್ತ, ರಾಗಿ ಸೇರಿದಂತೆ ವಿವಿಧ ಧಾನ್ಯಗಳಿಗೆ ನಿರ್ದಿಷ್ಟಪಡಿಸಿರುವ ಬೆಂಬಲ ಬೆಲೆ ಎಷ್ಟು; (ಧಾನ್ಯಗಳವಾರು ಮಾಹಿತಿ ನೀಡುವುದು) ಹಾಗೂ ಹೆಚ್ಚುವರಿ ಪ್ರೋತ್ಸಾಹಧನ ನೀಡುವ ಕುರಿತು ಸರ್ಕಾರದ ನಿಲುವೇನು;</td><td>

2024-25ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರಾಗಿ, ಭತ್ತ ಮತ್ತು ಬಿಳಿಜೋಳದ ಖರೀದಿಗೆ ಕೇಂದ್ರ ಸರ್ಕಾರ ನಿಗಧಿಪಡಿಸಿರುವ ದರ ಮತ್ತು ಕೇಂದ್ರ ಹಾಗೂ ರಾಜ್ಯದ ಅನುಮತಿಯಂತೆ ನಿಗಧಿಪಡಿಸಿರುವ ಭತ್ತ, ರಾಗಿ ಮತ್ತು ಬಿಳಿ ಜೋಳದ ಖರೀದಿ ಮಿತಿ ಕೆಳಗಿನಂತಿದೆ.

<table>
<tr><th>ಬೆಳೆ</th><th>ಪ್ರತಿ ಕ್ವಿಂಟಾಲ್‌ಗೆ ದರ ರೂ.ಗಳಲ್ಲಿ</th></tr>
<tr><td>ಭತ್ತ (ಸಾಮಾನ್ಯ)</td><td>2300</td></tr>
<tr><td>ಭತ್ತ (ಗ್ರೇಡ್-ಎ)</td><td>2320</td></tr>
<tr><td>ರಾಗಿ</td><td>4290</td></tr>
<tr><td>ಜೋಳ (ಹೈಬ್ರಿಡ್)</td><td>3371</td></tr>
<tr><td>ಜೋಳ (ಮಾಲ್ದಂಡಿ)</td><td>3421</td></tr>
</table>

</td></tr>
</table>

<table>
<tr><td></td><td></td><td>2024-25ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗುವ ರಾಗಿ, ಭತ್ತ ಮತ್ತು ಜೋಳಕ್ಕೆ ಪ್ರೋತ್ಸಾಹಧನ ನೀಡುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.</td></tr>
<tr><td>ಇ</td><td>ಧಾನ್ಯಗಳನ್ನು ಎಷ್ಟು ಅವಧಿಯವರೆಗೆ ಖರೀದಿಸಲು ಉದ್ದೇಶಿಸಲಾಗಿದೆ; ಇರುವ ಷರತ್ತುಗಳೇನು; (ಸಂಪೂರ್ಣ ವಿವರ ನೀಡುವುದು)</td><td>2024-25 ನೇ ಸಾಲಿನ ಮುಂಗಾರು ಋತುವಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದ ರೈತರಿಂದ 2.24 ಲಕ್ಷ ಮೆಟ್ರಿಕ್ ಟನ್ ಭತ್ತ, (1.50 ಲಕ್ಷ ಮೆಟ್ರಿಕ್ ಟನ್ ಪರಿವರ್ತಿತ ಅಕ್ಕಿ) 4.30 ಲಕ್ಷ ಮೆಟ್ರಿಕ್ ಟನ್ ರಾಗಿ ಮತ್ತು 1.00 ಲಕ್ಷ ಮೆಟ್ರಿಕ್ ಟನ್ ಜೋಳವನ್ನು ಖರೀದಿಸಲು ಈ ಕೆಳಗಿನಂತೆ ಅವಧಿಯನ್ನು ನಿಗಧಿಪಡಿಸಲಾಗಿರುತ್ತದೆ.
<table>
<tr><th>ಕ್ರ.ಸಂ</th><th>ಬೆಳೆ</th><th>ರೈತರ ನೋಂದಣಿ ಪ್ರಾರಂಭ ಅವಧಿ</th><th>ಧಾನ್ಯ ಖರೀದಿ ಮುಕ್ತಾಯದ ಅವಧಿ</th></tr>
<tr><td>1</td><td>ಭತ್ತ</td><td>01.12.2024 ರಿಂದ 28.02.2025</td><td>01.01.2025 ರಿಂದ 31.03.2025</td></tr>
<tr><td>2</td><td>ರಾಗಿ</td><td>01.12.2024 ರಿಂದ 31.03.2024</td><td>01.01.2025 ರಿಂದ 31.03.2025</td></tr>
<tr><td>3</td><td>ಜೋಳ</td><td>01.12.2024 ರಿಂದ 31.03.2024</td><td>01.01.2025 ರಿಂದ 31.03.2025</td></tr>
</table></td></tr>
<tr><td>ಈ</td><td>ಪ್ರತಿ ರೈತರಿಂದ ಧಾನ್ಯಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಖರೀದಿಸಲಾಗುವುದೋ ಅಥವಾ ಇದಕ್ಕೆ ಮಿತಿ ಇಲ್ಲವೇ; ಧಾನ್ಯಗಳ ಗರಿಷ್ಠ ಪ್ರಮಾಣದಲ್ಲಿ ಖರೀದಿಸುವುದಾದರೆ ಆ ಪ್ರಮಾಣ ಎಷ್ಟು; (ವಿವರ ನೀಡುವುದು)</td><td>2024-25 ನೇ ಸಾಲಿನ ಮುಂಗಾರು ಋತುವಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದ ರೈತರಿಂದ 2.24 ಲಕ್ಷ ಮೆಟ್ರಿಕ್ ಟನ್ ಭತ್ತ, (1.50 ಲಕ್ಷ ಮೆಟ್ರಿಕ್ ಟನ್ ಪರಿವರ್ತಿತ ಅಕ್ಕಿ) 4.30 ಲಕ್ಷ ಮೆಟ್ರಿಕ್ ಟನ್ ರಾಗಿ ಮತ್ತು 1.00 ಲಕ್ಷ ಮೆಟ್ರಿಕ್ ಟನ್ ಜೋಳವನ್ನು ಖರೀದಿಸಲು ಈ ಕೆಳಗಿನಂತೆ ಪ್ರಮಾಣವನ್ನು ನಿಗಧಿಪಡಿಸಲಾಗಿರುತ್ತದೆ.
<table>
<tr><th>ಆಹಾರಧಾನ್ಯ</th><th>ಪ್ರಮಾಣ</th></tr>
<tr><td>ಭತ್ತ</td><td>ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಪ್ರತಿ ರೈತರಿಂದ ಗರಿಷ್ಠ 50 ಕ್ವಿಂಟಾಲ್</td></tr>
<tr><td>ರಾಗಿ</td><td>ಪ್ರತಿ ಎಕರೆಗೆ 10 ಕ್ವಿಂಟಾಲ್‌ನಂತೆ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಾಲ್</td></tr>
<tr><td>ಜೋಳ</td><td>ಪ್ರತಿ ಎಕರೆಗೆ 10 ಕ್ವಿಂಟಾಲ್‌ನಂತೆ ಪ್ರತಿ ರೈತರಿಂದ ಗರಿಷ್ಠ 150 ಕ್ವಿಂಟಾಲ್</td></tr>
</table></td></tr>
</table>

| | | |
|---|---|---|
| ಉ | ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಶಾಶ್ವತವಾಗಿ ಧಾನ್ಯಗಳ ಖರೀದಿ ಕೇಂದ್ರಗಳನ್ನು ತೆರೆಯುವ ಕುರಿತು ಸರ್ಕಾರದ ನಿಲುವೇನು? | ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ಖರೀದಿಗೆ ನಿಗಧಿಗೊಳಿಸಿರುವ ಅವಧಿಯಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ, ಭತ್ತ ಮತ್ತು ಬಿಳಿಜೋಳ ಖರೀದಿಸಲಾಗುತ್ತಿದೆ. |

**ಆನಾಸ 192 ಆರ್‌ಪಿಆರ್ 2024**

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು

## ಅನುಬಂಧ-1

## PADDY PROCUREMENT CENTERS

| SL.No | District | TOTAL |
|---|---|---|
| 1 | BALLARI | 8 |
| 2 | BIDAR | 5 |
| 3 | CHAMARAJANAGARA | 4 |
| 4 | CHIKKAMAGALURU | 5 |
| 5 | DAKSHINA KANNADA | 7 |
| 6 | DAVANAGERE | 4 |
| 7 | DHARWAR | 2 |
| 8 | GADAG | 1 |
| 9 | KALABURAGI | 8 |
| 10 | HASSAN | 22 |
| 11 | HAVERI | 3 |
| 12 | KODAGU | 5 |
| 13 | KOPPAL | 3 |
| 14 | MANDYA | 9 |
| 15 | MYSURU | 16 |
| 16 | RAMANAGARA | 5 |
| 17 | SHIVAMOGGA | 7 |
| 18 | UDUPI | 3 |
| 19 | UTTARA KANNADA | 8 |
| 20 | YADGIR | 5 |
| 21 | VIJAYANAGARA | 6 |
| | **TOTAL** | **136** |

## ಅನುಬಂಧ-2

## RAGI PROCUREMENT CENTERS

| SL.No | District | TOTAL |
|---|---|---|
| 1 | BENGALURU | 4 |
| 2 | BENGALURU RURAL | 4 |
| 3 | BELAGAVI | 4 |
| 4 | BALLARI | 8 |
| 5 | CHAMARAJANAGARA | 5 |
| 6 | CHIKKAMAGALURU | 8 |
| 7 | CHITRADURGA | 6 |
| 8 | CHIKKABALLAPURA | 6 |
| 9 | DAVANAGERE | 5 |
| 10 | HASSAN | 22 |
| 11 | HAVERI | 2 |
| 12 | KODAGU | 5 |
| 13 | KOLAR | 9 |
| 14 | MANDYA | 12 |
| 15 | MYSURU | 16 |
| 16 | RAMANAGARA | 5 |
| 17 | TUMAKURU | 10 |
| 18 | VIJAYANAGARA | 6 |
| | **TOTAL** | **137** |

# ಅನುಬಂಧ-3

## JOWAR PROCUREMENT CENTERS

| SL.No | District | TOTAL |
|---|---|---|
| 1 | BAGALKOTE | 9 |
| 2 | BELAGAVI | 4 |
| 3 | BALLARI | 8 |
| 4 | BIDAR | 5 |
| 5 | VIJAYAPURA | 7 |
| 6 | DHARWAR | 2 |
| 7 | GADAG | 4 |
| 8 | KALABURAGI | 7 |
| 9 | HAVERI | 3 |
| 10 | KOPPAL | 3 |
| 11 | RAICHUR | 30 |
| 12 | YADGIR | 5 |
| 13 | VIJAYANAGARA | 6 |
| | **TOTAL** | **93** |